# <u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>

**MVC 251-24** **RW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರ ಪರ ಶ್ರೀ H V K M, ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು, ಅದಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.**

**ಮುಂದಿನ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**O.S. 164-25** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ N K K, ವಕೀಲರಿಂದಃ**

2. ನನ್ನ ತಂದೆ ಹೆಸರು ಲಕ್ಷ್ಮಪ್ಪ ಹಾಗೂ ತಾಯಿ ಹೆಸರು ಯಲ್ಲವ್ವ. ಇಬ್ಬರೂ ಮರಣ ಹೊಂದಿದ್ದಾರೆ. ಬಸಪ್ಪ, ಫಕ್ಕೀರಪ್ಪ ಹಾಗೂ ಕುಬೇರಪ್ಪ ಅಂತಾ ಮಕ್ಕಳು ಅಂದರೆ ಸರಿ. ಬಸಪ್ಪ ಹಾಗೂ ಕುಬೇರಪ್ಪ ರವರು ಮರಣ ಹೊಂದಿದ್ದಾರೆ. ಪ್ರತಿವಾದಿ 1 ರಿಂದ 13 ರವರು ಬಸಪ್ಪ ನ ವಾರಸುದಾರರು ಅಂದರೆ ಸರಿ. ಪ್ರತಿವಾದಿ 15 ರಿಂದ 20 ರವರು ಕುಬೇರಪ್ಪ ನ ವಾರಸುದಾರರು ಅಂದರೆ ಸರಿ. ದಾವಾ ಆಸ್ತಿ ವಾದಿ ಹಾಗೂ ಪ್ರತಿವಾದಿಗಳ ಮಾಲ್ಕಿ ಆಸ್ತಿ ಅಂದರೆ ಸರಿ. ಎಲ್ಲರೂ ಸೇರಿ ಸಾಗುವಳಿ ಮಾಡುತ್ತೇವೆ ಅಂದರೆ ಸರಿ. ದಾವಾ ಆಸ್ತಿಯಲ್ಲಿ ನನಗೆ ನನಗೆ 1/3 ರಷ್ಟು ಹಾಗೂ ಬಸಪ್ಪ ಹಾಗೂ ಕುಬೇರಪ್ಪ ರವರ ವಾರಸುದಾರರಿಗೆ ತಲಾ 1/3 ರಷ್ಟು ಹಕ್ಕು ಇದೆ ಅಂದರೆ ಸರಿ. ಅವರಿಗೆ 1/3 ರಷ್ಟು ಪಾಲು ಕೊಡಲು ನನ್ನ ತಕರಾರು ಇಲ್ಲ. ವಾಟ್ನಿ ಸಲುವಾಗಿ ದಾವೆ ಸಲ್ಲಿಸಿದ್ದೇನೆ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**FDP 16-12** **PW : 2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಎರಡನೇ ಎದುರುದಾರ ಪರ ವಕೀಲರು ಸಮಯ ಕೋರಿರುತ್ತಾರೆ, ಇದು ಹಳೇ ಪ್ರಕರಣವಾಗಿರುವುದರಿಂದ ಹಾಗೂ ಸಕಾರಣವಿಲ್ಲದ ಕಾರಣ, ಅವರ ಪಾರ್ಥನೆಯನ್ನು ತಿರಸ್ಕರಿಸಿ, ಅವರ ಪರವಾಗಿ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**O.S.206-20** **DW-3**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ M B N, ವಕೀಲರಿಂದಃ**

2. ನಾನು ಬಿ ಎ ವರೆಗೆ ವ್ಯಾಸಂಗ ಮಾಡಿದ್ದೇನೆ. Asian Security and personal arrangements Agency ಮಾಲಿಕ ಅಂತಾ ಕೆಲಸ ಮಾಡುತ್ತಿದ್ದೇನೆ. ನಾನು 12 ವರ್ಷಗಳ ಹಿಂದೆ ಗೋಕುಲ ರೋಡಿನಲ್ಲಿ ವಾಸವಾಗಿದ್ದೆನು. ಗೋಕುಲ ರೋಡ ಬಿಟ್ಟು, ಕೇಶ್ವಾಪೂರದಲ್ಲಿ ವಾಸ ಮಾಡುತ್ತಿದ್ದೇನೆ ಅಂದರೆ ಸರಿ. ನಾನು 9 ವರ್ಷಗಳ ಹಿಂದೆ ಮನೆ ಕಟ್ಟಿಸಿದ್ದೇನೆ. ನಾನು ಇತ್ತೀಚೆಗೆ ಕುಂಬಾರ ಓಣಿಯಲ್ಲಿ ವಾಸವಾಗಿದ್ದೇನೆ. 9 ವರ್ಷಗಳ ಹಿಂದೆ ಮನೆ ಕಟ್ಟಿಸಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನೇ ಮುಖ್ಯ ವಿಚಾರಣೆಗೆ ಮಾಹಿತಿ ನೀಡಿದ್ದೇನೆ. ವಾದಿ - ಪ್ರತಿವಾದಿಗಳ ದಾಖಲೆಗಳನ್ನು ತಿಳಿದುಕೊಂಡಿದ್ದೇನೆ. ಪ್ರತಿವಾದಿ 8 ರಿಂದ 62 ರವರ ಪರವಾಗಿ ಸಾಕ್ಷಿ ನುಡಿಯಲು ಜಿ ಪಿ ಎ ಮಾಡಿಕೊಂಡಿಲ್ಲ. ಮೌಖಿಕವಾಗಿ ಹೇಳಿದ್ದಾರೆ. ಅವರ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರವಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 8 ರಿಂದ 62 ರವರು ಸಂಬಂಧಿಕರಲ್ಲದ ಕಾರಣ, ಅವರ ಪರವಾಗಿ ಸಾಕ್ಷಿ ನುಡಿಯಲು ಬರುವುದಿಲ್ಲ ಅಂದರೆ ಸರಿಯಲ್ಲ. ಶಿವಪ್ಪ ಹುಬ್ಬಳ್ಳಿ ರವರ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ಪಿತ್ರಾರ್ಜಿತ ಆಸ್ತಿ ಅಲ್ಲವೆಂದು ಹೇಳುತ್ತಿದ್ದೇನೆ. ಶಿವಪ್ಪ ಹುಬ್ಬಳ್ಳಿ ಹಾಗೂ ಅವರ ತಂದೆ ಕೇಶಪ್ಪ ರವರು ಒಕ್ಕಲುತನ ಬಿಟ್ಟರೆ ಬೇರೆ ಏನೂ ಮಾಡುತ್ತಿರಲಿಲ್ಲ ಅಂದರೆ ಗೊತ್ತಿಲ್ಲ. ಶಿವಪ್ಪ ಹುಬ್ಬಳ್ಳಿ ನಿಗೆ ಒಕ್ಕಲುತನ ಆದಾಯ ಬಿಟ್ಟರೆ ಬೇರೆ ಆದಾಯ ಇರಲಿಲ್ಲ ಅಂದರೆ ಗೊತ್ತಿಲ್ಲ. ಕಾನೂನು ಅಭಿಪ್ರಾಯ ಪಡೆದಿದ್ದರಿಂದ ವಾದಿಯೂ ಮನೆತನದ ಆದಾಯದಿಂದ ಖರೀದಿ ಮಾಡಿಲ್ಲವೆಂದು ಹೇಳುತ್ತಿದ್ದೇನೆ. ಕಾನೂನು ಅಭಿಪ್ರಾಯ ಪಡೆದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಶಿವಪ್ಪ ಹುಬ್ಬಳ್ಳಿ ನ ವಾರಸುದಾರರು ಯಾರು ಯಾರು ಇದ್ದರೆಂದು ತಿಳಿದುಕೊಳ್ಳಲು ಪ್ರಯತ್ನಿಸಿದ್ದೇನೆ. ವಾದಿ, ಪ್ರತಿವಾದಿ - 4 ರಿಂದ 6 ರವರು ಶಿವಪ್ಪನ ಹೆಣ್ಣು ಮಕ್ಕಳು ಅಂದರೆ ಸರಿ. ನಮ್ಮ ಖರೀದಿ ಪತ್ರಕ್ಕೆ ಹೆಣ್ಣು ಮಕ್ಕಳ ಒಪ್ಪಿಗೆ ಪಡೆದಿಲ್ಲ ಅಂದರೆ ಸರಿ. ಖರೀದಿ ಕಾಲಕ್ಕೆ ಪತ್ರಿಕಾ ಪ್ರಕಟಣೆ ಹೊರಡಿಸಿಲ್ಲ. ವಾಟ್ನಿ ಪತ್ರವನ್ನು ಕೂಲಂಕುಶವಾಗಿ ನೋಡಿದ್ದೇನೆ. ನಿಪಿ.1 ರಲ್ಲಿ ಏಕತ್ರ ಕುಟುಂಬದ ಸ್ಥಾವರ ಆಸ್ತಿಗಳೆಂದು ಬರೆಯಲಾಗಿದೆ ಅಂದರೆ ಗೊತ್ತಿಲ್ಲ. ನಾನು ದಾಖಲೆ ನೋಡದೇ, ಎಲ್ಲಾ ದಾಖಲೆಗಳನ್ನು ನೋಡಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**O.S.206-20** **DW-3**

ಜಿ ಪಿ ಎ ದಾರರು ಯಾವುದೇ ಋಣಭಾರ ಇಲ್ಲವೆಂದು ಹೇಳಿದ್ದಕ್ಕೆ ನಾನು ಖರೀದಿ ಪತ್ರ ಮಾಡಿಕೊಂಡಿದ್ದೇನೆ ಅಂದರೆ ಸರಿ. ಜಿ ಪಿ ಎ ಧಾರರು ತಯಾರು ಮಾಡಿದ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ ವಿನಃ ಯಾವುದೇ ವಿಷಯ ಗೊತ್ತಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ರವರು ಎಲ್ಲಿ ಸಾಲ ಪಡೆದಿದ್ದರು, ಹಾಗೂ ಯಾವ ಬ್ಯಾಂಕಿನಲ್ಲಿ ಸಾಲ ಮಾಡಿದ್ದರು ಎಂದು ಗೊತ್ತಿಲ್ಲ. ಪ್ರತಿವಾದಿ 1 ರಿಂದ 3 ರವರಿಗೆ ಹಣಕಾಸಿನ ತೊಂದರೆ ಇರಲಿಲ್ಲ, ಸಾಲ ಮಾಡಿರಲಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ರವರಿಗೆ ಸಾಲ ಎಷ್ಟು ಇದೆ ಅಂತಾ ವಿಚಾರ ಮಾಡಿಲ್ಲ. ಸ ನಂಃ 679/1 ನ್ನು ಅಭಿವೃದ್ಧಿಪಡಿಸಲು ಪ್ರತಿವಾದಿ 1 ರಿಂದ 3 ರವರು ಕೊಟ್ಟಿದ್ದರು. ಸದರಿ ವಿಷಯ ನನಗೆ ಮಂಕಣಿ ವಕೀಲರಿಂದ ಗೊತ್ತು ಅಂದರೆ ಸರಿಯಲ್ಲ. ದಾಖಲೆಗಳನ್ನು ನಮ್ಮ ವಕೀಲರಿಗೆ ಕೊಟ್ಟು ಅವರು ಸಲಹೆ ಚೀಟಿ ಕೊಟ್ಟ ನಂತರ ನಾನು ಖರೀದಿ ಮಾಡಿದ್ದೇನೆ. ಇನ್ನೊಂದು ಆಸ್ತಿಯನ್ನು ಅಭಿವೃದ್ಧಿಪಡಿಸಲು ಕೊಟ್ಟಿದ್ದಾರೆಂದು ನನಗೆ ಹೇಗೆ ಗೊತ್ತಾಯಿತು ಅಂದರೆ ಗೊತ್ತಿಲ್ಲ. ಬ್ಲಾಕ ನಂಃ 938 ಶಿವಪ್ಪ ಹಾಗೂ ಬಸಪ್ಪ ರವರು ಸಾಗುವಳಿ ಮಾಡಿದ್ದರಿಂದ ಭೂ--ನ್ಯಾಯಮಂಡಳಿಯನ್ನು ಸದರಿ ಆಸ್ತಿಯನ್ನು ಮಂಜೂರು ಮಾಡಿದ ಬಗ್ಗೆ ಗೊತ್ತಿಲ್ಲ. ಸದರಿ ಆಸ್ತಿಯ ಆದಾಯದಿಂದ ಶಿವಪ್ಪ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾನೆ ಅಂದರೆ ಗೊತ್ತಿಲ್ಲ. ನಿಪಿ.1 ರ ಪ್ರಕಾರ ದಾವಾ ಆಸ್ತಿಗಳು ಏಕತ್ರ ಕುಟುಂಬದ ಆಸ್ತಿಗಳೆಂದು ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮುಂದಿನ ಪಾಟಿ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**MVC 219-23 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀಮತಿ- S S I, ವಕೀಲರಿಂದಃ**

**ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

3. ಶ್ರೀಮತಿ ಲಕ್ಷ್ಮೀ ಮಂಜುನಾಥ ಪೀರಣ್ಣವರ ರವರು ಕೆ ಎಂ ಸಿ ಆರ್ ಐ ಆಸ್ಪತ್ರೆ, ಹುಬ್ಬಳ್ಳಿಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆ ಹಾಜರಪಡಿಸಿದ್ದು ಅದನ್ನು ನಿಪಿ.8 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.